ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮಾದಕದ್ರವ್ಯ ಪ್ರಕರಣಗಳ ವಿಶೇಷ ನ್ಯಾಯಾಲಯ, ಕೋಲಾರ

Spl.C.(NDPS) 40/2024

ಪ್ರಾಸಾಃ 3 ಚಾಸಾಃ 4

ದಿನಾಂಕಃ 10-07-2025

ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಹೆಸರು | ಃ- | ಸಿ ರಾಮಲಕ್ಷ್ಮಣ್ |
| ತಂದೆಯ ಹೆಸರು | ಃ- | ಚಿಕ್ಕರಾಮಯ್ಯ |
| ವಯಸ್ಸು | ಃ- | 61 ವರ್ಷ |
| ಉದ್ಯೋಗ | ಃ- | ನಿವೃತ್ತ ತಹಸೀಲ್ದಾರ್ |
| ವಾಸ ಸ್ಥಳ | ಃ- | ಬೆಂಗಳೂರು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ

ದಿನಾಂಕಃ 22-02-2024 ರಿಂದ 13-06-2024 ರವರೆಗೆ ತಹಸೀಲ್ದಾರ್ ಆಗಿ ಕೆಜಿಎಫ್ ನಲ್ಲಿ ಕೆಲಸ ಮಾಡಿದ್ದೇನೆ.

ದಿನಾಂಕಃ 23-02-2024 ರಂದು ನಾನು ಕಚೇರಿಯಲ್ಲಿದ್ದಾಗ ಪೊಲೀಸರು ಒಂದು ಗಾಂಜಾ ದಾಳಿ ಪ್ರಕರಣದ ಬಗ್ಗೆ ಮಾಹಿತಿ ಬಂದಿದೆ ಪತ್ರಾಂಕಿತ ಅಧಿಕಾರಿಯಾಗಿ ಸಹಕರಿಸಲು ಮನವಿ ಕೊಟ್ಟಿದ್ದಾರೆ, ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಮಧ್ಯಾಹ್ನ 01-30 ಗಂಟೆಗೆ ಗುನ್ನೆ ಜಾಗೆಗೆ ನನ್ನ ವಾಹನದಲ್ಲಿ ಹೋದೆ. ನಾನು ಅಲ್ಲಿಗೆ ಹೋದಾಗ ಪೊಲೀಸರು ಪಂಚರು ಇದ್ದರು. ಪೊಲೀಸರು ದಾಳಿ ಮಾಡಿ ಆಸಾಮಿಯನ್ನು ಹಿಡಿದುಕೊಂಡಿದ್ದರು. ಆರೋಪಿ ಜಾನ್ ಪಾಲ್ ಎಂದು ಹೇಳಿದ. ನಾನು ಆತನಿಗೆ ಪತ್ರಾಂಕಿತ ಅಧಿಕಾರಿ ಎಂದು ಪರಿಚಯಿಸಿಕೊಂಡು ನಾನು ಅಥ್ವಾ ನ್ಯಾಯಾಧೀಶರು ಶೋಧನ ಮಾಡಬಹುದೇ ಎಂದು ಕೇಳಿದೆ. ಆರೋಪಿ ನಾನೇ ಶೋಧನೆ ಮಾಡಬಹುದು ಎಂದು ಒಪ್ಪಿಗೆ ನೀಡಿದ. ಅದನ್ನು ನಿಪಿ-6 ಎಂದು, ಆರೋಪಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಆತನ ಬಳಿ ಒಂದು ಚೀಲ ಇತ್ತು, ನೋಡಲಾಗಿ ಗಾಂಜಾ ಇರುವುದು ಕಂಡು ಬಂತು. ತೂಕದ ಯಂತ್ರದಿಂದ ತೂಕ ಮಾಡಿದರು. 1 ಕೆಜಿ 100 ಗ್ರಾಮ್ ಇತ್ತು. ನಂತರ ಪ್ರತ್ಯೇಕ ಚೀಲದಲ್ಲಿ ಗಾಂಜಾ ಸುತ್ತಿ ಸಿಎಸ್ ಎಂಬ ಸೀಲನ್ನು ಹಾಕಿ ವಶಪಡಿಸಿಕೊಂಡರು. ಗಾಂಜಾ ಮಾರಾಟದಿಂದ ಬಂದ ಹಣ ರೂ.500/- ಕೂಡ ವಶಪಡಿಸಿಕೊಂಡರು. ಅದರ ಗುರುತಿನ ಬಗ್ಗೆ ತಮ್ಮ ಆಕ್ಷೇಪ ಇಲ್ಲ ಎಂದು ವಕೀಲರು ತಿಳಿಸಿದ್ದಾರೆ. ಅಲ್ಲಿ ಬರವಣಿಗೆ ಮಾಡಿ ನಮ್ಮ ಸಹಿ ಪಡೆದರು. ಅದನ್ನು ನಿಪಿ-2 ಎಂದು ಗುರುತಿಸಲಾಗಿದೆ, ನಿಪಿ-2(ಸಿ) ನನ್ನ ಸಹಿ. ಆ ಸಮಯದಲ್ಲಿ ಈಗ ತೋರಿಸಲಾದ 2 ಫೋಟೋಗಳನ್ನು ತೆಗೆದರು. ಅವುಗಳನ್ನು ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಗಿದೆ. ಆರೋಪಿ ಮತ್ತು ಗಾಂಜಾ ಫೋಟೋಗಳಲ್ಲಿ ಕಂಡು ಬರುತ್ತಾರೆ. ಆರೋಪಿಯನ್ನು ನೋಡಿ ಗುರುತಿಸಿದ್ದೇನೆ.

ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಸ್‌ಎಂಜಿ ವಕೀಲರಿಂದಃ

ನಾನು ನೋಡಲಾಗಿ ಎಲೆ ಮತ್ತು ಬೀಜಗಳಿಂದ ಕೂಡಿದ ಗಾಂಜಾ ಇತ್ತು. ಅದು ಒಣಗಿದ ಗಾಂಜಾ. ಮಹಜರಿನಲ್ಲಿ ಎಲೆಗಳಿಂದ ಕೂಡಿದ ಗಾಂಜಾ ಎಂದು ಬರೆದಿಲ್ಲ ಎಂದರೆ ಸರಿ. ನನ್ನ ಪ್ರಕಾರ ಬೀಜ ಮತ್ತು ಎಲೆ ಮಾತ್ರ ಇದ್ದವು. ಗುನ್ನೆ ಜಾಗೆ ಯಾರಿಗೆ ಸಂಬಂಧಿಸಿದ್ದು ನನಗೆ ಗೊತ್ತಿಲ್ಲ. ರೂ.500/- ನೋಟಿನ ಸಂಖ್ಯೆ ಹೇಳಲಾರೆ. ಅದನ್ನು ಆರೋಪಿಯಿಂದ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಎಲೆ ಮತ್ತು ಬೀಜ ಪ್ರತ್ಯೇಕಿಸಿ ತೂಕ ಮಾಡಲಿಲ್ಲ. ಫೋಟೋಗಳಲ್ಲಿ ಗಾಂಜಾ ತೂಕದಲ್ಲಿ ವ್ಯತ್ಯಾಸ ಕಂಡು ಬರುತ್ತದೆ ಎಂದರೆ ಸರಿ. ಆರೋಪಿತನ ಕಡೆಯಿಂದ ಯಾವುದೇ ಗಾಂಜಾ ಮತ್ತು ಹಣ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಅಂಗಶೋಧನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಶೋಧನೆಗೆ ಒಪ್ಪಿಗೆ ಕೊಟ್ಟ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲಿ ತಯಾರಿಸಿದ್ದು ನಾನು ಅಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

**(ಮಂಜುನಾಥ ಜಿ.ಎ)**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.